


ಪ್ರತಿದಿನ ಮುಂಜಾವಿನಲ್ಲಿ ಮೈಸೂರಿನ ಅರಮನೆ ಗೇಟಿನ ಬಳಿ ಕಾಣುವ ಮನೋಹರ ದೃಶ್ಯವಿದು. ನೂರಾರು ಪಕ್ಷಿಗಳು ಸ್ವಚ್ಛಂದ ಮತ್ತು ಆನಂದವನ್ನು ಹರಡುವ ವಾಹಕರಂತೆ ಹಾರಿಹೋಗುವ ಈ ದೃಶ್ಯ ತನ್ನ ಸಾಂಕೇತಿಕತೆಯನ್ನು ನಿಧಾನಕ್ಕೆ ಕಳೆದುಕೊಳ್ಳುತ್ತಿವೆ.

## ದಸರ ವೈಭವ ಮರೆಯಾಗಿದೆ...

ಮೊದಲ ಬಾರಿ ದಸರೆ ನೋಡಿದಾಗ ನನಗೆ ಏಳೆಂಟು ವರ್ಷ ಇರಬಹುದು. ಮಂಡ್ಯದಿಂದ ಮೈಸೂರಿಗೆ ನನ್ನನ್ನು ಅಪ್ಪ ಕರೆ ತರುತ್ತಿದ್ದರು. ದಸರೆ ಎಂಬ ವಿಸ್ಮಯ ಲೋಕವನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದೆ. ಅದೊಂದು ವರ್ಣರಂಜಿತ ಲೋಕದಂತೆ ಭಾಸವಾಗುತಿತ್ತು. ಹೈಸ್ಕೂಲ್ ಸೇರಿದ ಮೇಲೆ ರೈಲಿನಲ್ಲಿ ಗೆಳೆಯರೊಂದಿಗೆ ಬರುತ್ತಿದ್ದೆ. ಮೈಸೂರು ರಸ್ತೆಗಳಲ್ಲಿ ತಿರುಗಾಡುತ್ತಿದ್ದ ಹದಿಹರೆಯದ ಹುಡುಗಿಯರನ್ನು ನೋಡಿ ಖುಷಿ ಪಡುತ್ತಿದ್ದೆವು. ಅವರು ಯಾರನ್ನೋ ನೋಡಿ ನಕ್ಕರೆ ನಮ್ಮನ್ನೇ ನೋಡುತ್ತಿದ್ದಾರೇನೊ ಅನಿಸುತಿತ್ತು.

ನಾನು ಮೈಸೂರು ರಂಗಾಯಣದ ಮೊದಲ ಬ್ಯಾಚ್‌ನ ವಿದ್ಯಾರ್ಥಿ. ಆಗಿನ ನಿರ್ದೇಶಕ ಬಿ.ವಿ.ಕಾರಂತರು ನಮ್ಮನ್ನು ಅರಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಖಾಸಗಿ ದರ್ಬಾರ್, ದಿಗ್ಗಜರ ಸಂಗೀತ ಕಾರ್ಯಕ್ರಮ ತೋರಿಸುತ್ತಿದ್ದರು. ಕೆ.ಆರ್. ವೃತ್ತದಲ್ಲಿ ಕಟ್ಟಡವೇರಿ ಕುಳಿತು ಜಂಬೂಸವಾರಿ ನೋಡುತ್ತಿದ್ದೆವು. ಈಗ ದಸರೆಯ ವೈಭವ, ಹೊಳಪು ಕಡಿಮೆಯಾಗಿ, ಸರಳವಾಗಿದೆ. ದಸರೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವರಿಗೆ ನಷ್ಟವಾಗಿದೆ. ಏಕೆಂದರೆ ಹಲವರ ಜೀವನಕ್ಕೆ ದಸರೆ ಉತ್ಸವವೇ ದಾರಿ. ಅದರ ನಡುವೆಯೇ ವೈಭವದ ನೆನಪು ಮತ್ತೆ ಮತ್ತೆ ಕಾಡುತ್ತದೆ.

**-ಮಂಡ್ಯ ರಮೇಶ,** ನಟ



ಸಾಯಿಸಿದರು. ಈ ಘಟನೆಗಳು ಮೈಸೂರಿನಲ್ಲಿ ನಡೆದಿದ್ದಕ್ಕೆ ರಾಷ್ಟ್ರಮಟ್ಟದ ಸುದ್ದಿಯಾದವು. ಮೈಸೂರು ಕೂಡ ಸೇಫ್ ಅಲ್ಲ ಎಂಬ ಭಾವನೆ ಮೂಡಿಸಿವೆ.

### ಸ್ವಚ್ಛನಗರಿಯಾಗಿ ಉಳಿದಿದೆಯೇ?

ಉಳಿದ ದೇಶಗಳಿಗೆ ಹೋಲಿಸಿದರೆ ಮೈಸೂರಿನ ವಾತಾವರಣ ಅತ್ಯಂತ ಸುಂದರ. ನೈಸರ್ಗಿಕ ಸೊಬಗು ಇಲ್ಲಿದೆ. ವಾಸ ಮಾಡಲು ಯೋಗ್ಯ, ಸುರಕ್ಷಿತವೂ ಆದ ವಾತಾವರಣವನ್ನು ಮೈದುಂಬಿಕೊಂಡಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ಅಷ್ಟೊಂದು ಸುಲಭವಲ್ಲ. ಅದರಲ್ಲೂ ಪ್ರವಾಸಿ ತಾಣಗಳಲ್ಲಿ ಅದು ಮತ್ತಷ್ಟು ಸವಾಲಿನ ವಿಷಯ. ಇಂಥ ಸವಾಲುಗಳ ನಡುವೆ ಮೈಸೂರು ಸ್ವಚ್ಛನಗರಿ ಗರಿಮೆಗೆ ಹಲವಾರು ಬಾರಿ ಪಾತ್ರವಾಗಿದೆ. ಕಳೆದ ವರ್ಷ 3 ರಿಂದ 10 ಲಕ್ಷ ಜನಸಂಖ್ಯೆಯುಳ್ಳ ನಗರಗಳ ವಿಭಾಗದಲ್ಲಿ ಅಗ್ರಸ್ಥಾನ ಪಡೆದುಕೊಂಡಿತ್ತು.

ನಗರದ ಹೃದಯ ಭಾಗಕ್ಕೆ ಮಾತ್ರ ಈ ಸ್ವಚ್ಛತೆ ಸೀಮಿತವಾದಂತಿದೆ. ಏಕೆಂದರೆ ಬಡಾವಣೆಗಳಲ್ಲಿ ಕಸದ ರಾಶಿಯೇ ಇದೆ. ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂನಲ್ಲಿನಲ್ಲಿ ಕಸದ ಬೆಟ್ಟವೇ ನಿರ್ಮಾಣವಾಗಿದೆ. ಆದರೆ, ಸಮೀಕ್ಷೆಗೆಂದು ಬರುವ ಅಧಿಕಾರಿಗಳು ಅರಮನೆ ಸುತ್ತಮುತ್ತ, ಸ್ಥಳೀಯ ಅಧಿಕಾರಿಗಳು ಕರೆದಲ್ಲಿಗೆ ಹೋಗಿ ಅಂಕ ಕೊಟ್ಟು ಬಿಡುತ್ತಾರೆ. ರಾಷ್ಟ್ರೀಯ ಮಟ್ಟದಲ್ಲಿ ಮೈಸೂರು ಮಿಂಚಲಿ ಎಂಬ ಕಾರಣಕ್ಕೆ ಜನರೂ ಸುಮ್ಮನಾಗಿದ್ದಾರೆ.

ನಗರಗಳಲ್ಲಿ ಯಾವ ರೀತಿ ಸ್ವಚ್ಛತೆ ಕಾಪಾಡಲಾಗುತ್ತಿದೆ ಎಂಬುದನ್ನು ಮಾಪನ ಮಾಡಲು ಕೇಂದ್ರ ಸರ್ಕಾರವು 2010ರಿಂದ ರಾಷ್ಟ್ರಮಟ್ಟದಲ್ಲಿ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆ ನಡೆಸುತ್ತಿದೆ.

2014–15, 15–16ರಲ್ಲಿ ನಡೆದ ಸಮೀಕ್ಷೆಯಲ್ಲಿ ದೇಶದಲ್ಲಿಯೆ ಅತ್ಯಂತ ಸ್ವಚ್ಛನಗರ ಹಿರಿಮೆಗೆ ಮೈಸೂರು ಪಾತ್ರವಾಗಿತ್ತು. 2016 17ರಲ್ಲಿ 5ನೇ ಸ್ಥಾನ, 2017–18ರಲ್ಲಿ 8ನೇ ಸ್ಥಾನಕ್ಕೆ ಕುಸಿದಿತ್ತು. 2018ರಲ್ಲಿ ಮಧ್ಯಮ ನಗರ ವಿಭಾಗದಲ್ಲಿ (3 ರಿಂದ 10 ಲಕ್ಷ ಜನಸಂಖ್ಯೆ) ದೇಶದ ನಂಬರ್ 1 ಸ್ವಚ್ಛ ನಗರಿ ಪಟ್ಟ ಗಿಟ್ಟಿಸಿಕೊಂಡಿತ್ತು. 2016ರಲ್ಲಿ ಬಯಲು ಶೌಚಮುಕ್ತ ನಗರ ಪ್ರಶಸ್ತಿ, 2019ರಲ್ಲಿ ತ್ಯಾಜ್ಯ ಮುಕ್ತ ನಗರಿ ಪ್ರಶಸ್ತಿಯನ್ನೂ ಮೈಸೂರು ಮುಡಿಗೇರಿಸಿಕೊಂಡಿತ್ತು.

ಪ್ರತಿಕ್ರಿಯಿಸಿ: feedback.sudha.co.in